ನಾಳೆ ಇನ್ವಿಸ್ಟಿಗೇಶನ್‌ಗೂ ಕೂಡ ತೊಂದರೆಯಾಗಬಹುದು. ಆದರೆ ಅವರು ಕೆಲವು ಮಾಹಿತಿಗಳನ್ನು ಕೇಳಿದ್ದಾರೆ. ಆ ಮಾಹಿತಿಗಳನ್ನು ನಾನು ನಾಳೆ ಒದಗಿಸಿಕೊಡುತ್ತೇನೆ. ಯಾರ್ಯಾರನ್ನು ಅರೆಸ್ಟ್ ಮಾಡಿದ್ದಾರೋ ಅಥವಾ ಜಾರ್ಜ್‌ಶೀಟ್ ಹಾಕಿದ್ದಾರೋ, ಅದು ಯಾವ ಸ್ಟೇಜ್‌ನಲ್ಲಿದೆ ಎನ್ನತಕ್ಕದ್ದು ನಾಳೆ ಅವರ ಗಮನಕ್ಕೆ ನಾನು ತರುತ್ತೇನೆ.

ಆ) ಬಾಗೇಪಲ್ಲಿ ಕ್ಷೇತ್ರದ ಗುಡಿಬಂಡೆ ತಾಲ್ಲೂಕಿನಲ್ಲಿ ಒಬ್ಬ ಹರಿಜನ ಬಾಲಕ ಆಕ್ಸಿಡೆಂಟ್‌ನಲ್ಲಿ ಮೃತಪಟ್ಟ ಪ್ರಕರಣದ ಹಿನ್ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳು ನಾಲ್ಕು ಹರಿಜನರ ಮನೆಗಳನ್ನು ಧ್ವಂಸ ಮಾಡಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ:-

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, ಗುಡಿಬಂಡೆ ತಾಲ್ಲೂಕಿನಲ್ಲಿ ಮೊನ್ನೆ ಆಕ್ಸಿಡೆಂಟ್‌ನಲ್ಲಿ ಒಬ್ಬ ಹರಿಜನ ಬಾಲಕ ಮೃತಪಟ್ಟ ಹಿನ್ನೆಲೆಯಲ್ಲಿ ಒಂದು ದೊಡ್ಡ ಘಟನೆಯಾಗಿದೆ. ಈ ಗುಡಿಬಂಡೆ ಬಹಳ ಸಣ್ಣ ತಾಲ್ಲೂಕು. ಅಲ್ಲಿ ಪಟ್ಟಣದಲ್ಲಿ ಒಂದು ರಸ್ತೆ ಹೋಗುತ್ತದೆ. ಅದು 700 ಅಥವಾ 800 ಮೀಟರ್ ಇರತಕ್ಕಂಥ ಒಂದು ಮುಖ್ಯರಸ್ತೆ. ಅದು ಸುಮಾರು ವರ್ಷಗಳಿಂದ ಒತ್ತುವರಿ ಮಾಡಿರತಕ್ಕಂಥ ರಸ್ತೆ. ಆ ರಸ್ತೆಯಲ್ಲಿ ದೇವಸ್ಥಾನದಿಂದ ಹಿಡಿದು, ಮಸೀದಿಯಿಂದ ಹಿಡಿದು, ಮುನಿಸಿಪಾಲಿಟಿಯಿಂದ ಹಿಡಿದು ಎಲ್ಲಾ ಕೂಡ ಆ ರಸ್ತೆಯಲ್ಲೇ ಇರತಕ್ಕದ್ದು. ಆದರೆ ಬಹಳ ವರ್ಷಗಳಿಂದ ಒಂದು ಒತ್ತಡ ಇದೆ. ರಸ್ತೆ ಅತಿಕ್ರಮಣ ಮಾಡಿರತಕ್ಕವರನ್ನು ದೂರ ಸರಿಸಿ ರಸ್ತೆ ಅಗಲ ಮಾಡುವ ವಿಚಾರದಲ್ಲಿ ಬಹಳ ವರ್ಷಗಳಿಂದ ಒತ್ತಡ ಇದೆ. ಆದರೆ ಇದುವರೆಗೂ ಆ ರಸ್ತೆಯನ್ನು ಅಗಲ ಮಾಡತಕ್ಕಂಥ ಕೆಲಸಕ್ಕೆ ಯಾರೂ ಕೂಡ ಕೈಹಾಕಲಿಕ್ಕೆ ಹೋಗಿರಲಿಲ್ಲ. ಪಿ.ಡಬ್ಲ್ಯೂ.ಡಿ. ಇಲಾಖೆ ಮುಖಾಂತರ ಆ ರಸ್ತೆಯನ್ನು ಅಗಲಮಾಡದೆ, ಯಾರಿಗೂ ಕೂಡ ಅನಾನುಕೂಲವಾಗದಂತೆ ಬೈಪಾಸ್ ಮೂಲಕ ರಸ್ತೆಯಲ್ಲಿ ಓಡಾಡಲಿಕ್ಕೆ ಅವಕಾಶ ಮಾಡಬೇಕು ಎಂದು ಇಲಾಖೆಗೆ ಅನೇಕ ಅರ್ಜಿಗಳನ್ನು ಕೊಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ, ಒಬ್ಬ ಹರಿಜನ ಹುಡುಗ ಸತ್ತುಹೋದಂಥ ವಿಚಾರದಲ್ಲಿ ಗುಡಿಬಂಡೆ ಪಟ್ಟಣಕ್ಕೆ ಬಂದಂಥ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರು, ಇವರು ಮೂವರು,

(ಮಾನ್ಯ ಸದಸ್ಯರಾದ ಶ್ರೀ ಎ.ಎಸ್. ಗುರುಸ್ವಾಮಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಕೂಡ, ಇಲ್ಲಿ ವಿಧಾನಸಭೆ ನಡೆಯುತ್ತಿದ್ದು ನಾವು ಇಲ್ಲಿ ಇರುವಂಥ ಸಂದರ್ಭದಲ್ಲಿ ನಮ್ಮ ಗಮನಕ್ಕೆ ತಾರದೆ ಜಿಲ್ಲಾಧಿಕಾರಿಗಳು ಅಲ್ಲಿರತಕ್ಕಂಥವರಿಗೆ ಒಂದು ಭರವಸೆಯನ್ನು ಕೊಟ್ಟು ಆಕ್ಸಿಡೆಂಟ್‌ನಲ್ಲಿ ಸತ್ತ ಮಗುವಿನ ಮನೆಯವರಿಗೆ ಸ್ವಲ್ಪ ಪರಿಹಾರ ಕೊಟ್ಟು ಹೋಗುವಾಗ, ಅಲ್ಲಿ ಕೆಲವರು ಈ ಒಂದು ರಸ್ತೆಯನ್ನು ಅಗಲ ಮಾಡುವುದಕ್ಕೆ ಒತ್ತಡ ತಂದಾಗ ಅವರಿಗೆ ಒಂದು ಭರವಸೆಯನ್ನು ಕೊಟ್ಟು, ಶಾಸಕರಾದಂಥ ಮತ್ತು ಜನಪ್ರತಿನಿಧಿಗಳಾದಂಥ ನಮಗೆ ತಿಳಿಸದೆ ರಸ್ತೆ ಅಗಲ ಮಾಡುವುದಕ್ಕೆ ಆದೇಶವನ್ನು ಕೊಟ್ಟರು. ಆದೇಶವನ್ನು ಕೊಟ್ಟು ಅಥವಾ ಆದೇಶವನ್ನು ಕೊಡುವ ಮುಂಚೆ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು, ತಹಸೀಲ್ದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಯೋಚನೆ ಮಾಡಬೇಕಾಗಿತ್ತು. ಆದರೆ ಇವರು ಯಾರೂ ಕೂಡ ಮುನ್ನಾಲೋಚನೆ ಇಲ್ಲದೆ ಆ ರಸ್ತೆಯನ್ನು ತೆರವು ಮಾಡುವುದಕ್ಕೆ ಆದೇಶವನ್ನು ಕೊಟ್ಟು ರಸ್ತೆಯ ಪ್ರಾರಂಭದಲ್ಲಿ ಇರತಕ್ಕಂಥ

ನಾಲ್ಕು ಹರಿಜನ-ಗಿರಿಜನರ ಮನೆಗಳನ್ನು ಒಡೆದುಹಾಕಿಬಿಟ್ಟಿದ್ದಾರೆ. ಒಂದೊಂದು ಮನೆಯಲ್ಲಿ ಆರುಜನ-ಹನ್ನೆರಡು ಜನ ಇದ್ದವರನ್ನು, ಬಡತನದಲ್ಲಿ ಇರತಕ್ಕಂಥ ಮನೆಯವರನ್ನು ಹೊಡೆದು, ಮನೆಯನ್ನು ಧ್ವಂಸ ಮಾಡಿ ಇವತ್ತು ಅವರು ಬೀದಿಯಲ್ಲಿ ಇದ್ದಾರೆ. ಅಲ್ಲಿಂದ ಇವರು ಮುಂದೆ ಹೋಗಿ ಒಂದು ದೇವಸ್ಥಾನದ ಕಾಂಪೌಂಡ್‌ನ್ನು ಕೆಡವಿದರು ಮತ್ತು ಅಲ್ಲಿಂದ ಮುಂದೆ ಮಸೀದಿಯನ್ನೂ ಕೆಡವಿದರು. ಅಲ್ಲಿಂದ ಮುಂದೆ ಹೋಗಲಿಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಅದು ಬಹಳ ಸಣ್ಣದಾದಂಥ ರಸ್ತೆಯಾಗಿದ್ದು, ಅಲ್ಲಿ ಜೆ.ಸಿ.ಬಿ. ಯನ್ನು ಏನು ತಂದಿದ್ದರು, ಅದು ಅಲ್ಲಿಂದ ಮುಂದೆ ಹೋಗುವುದಕ್ಕೆ ಆಗಲಿಲ್ಲ. ಅದು ಅಲ್ಲಿಗೇ ನಿಂತಿತು. ಆಗ ಇವರು ನಾವು ಕಟ್ಟಿಂಗ್ ಮೆಶಿನ್ ತರುತ್ತೇವೆ ಅಲ್ಲಿಯವರೆಗೆ ಇದನ್ನು ಒಡೆಯುವುದಿಲ್ಲ ಎಂದು ಅಧಿಕಾರಿಗಳು ವಾಪಸ್ಸು ಬರುತ್ತಾರೆ. ಅಧಿಕಾರಿಗಳು ವಾಪಸ್ಸು ಬಂದಾಗ ಜನರಿಗೆ ನೋವಾಯಿತು. ಬಡತನದಲ್ಲಿರತಕ್ಕಂಥ ನಮ್ಮ ಹರಿಜನರ ಮನೆಗಳನ್ನು ಒಡೆದುಹಾಕಿದಿರಿ, ಮಸೀದಿಯನ್ನು ಒಡೆದುಹಾಕಿದಿರಿ, ದೇವಸ್ಥಾನವನ್ನೂ ಒಡೆದುಹಾಕಿದಿರಿ, ಆದರೆ ಮುಂದೆ ಇರತಕ್ಕಂಥ ಶ್ರೀಮಂತರ ಮನೆಯನ್ನು ಒಡೆಯುವುದಕ್ಕೆ ನಿಮಗೆ ಆಗಲಿಲ್ಲ. ಜನರು ಏಕೆ ನೀವು ಈ ತರಹದ ಕೆಲಸವನ್ನು ಮಾಡುತ್ತೀರಿ ಎಂದು ರೊಚ್ಚಿಗೆದ್ದು ಇವೊತ್ತು ಮುಷ್ಕರಕ್ಕೆ ಕುಳಿತಿದ್ದಾರೆ. ಮುಷ್ಕರವು ನಾಲ್ಕನೇ ದಿವಸದಲ್ಲಿ ನಡೆಯುತ್ತಾ ಇದೆ. ಒಂದು ಕಡೆ ಮಿನಿಸಿಪಾಲಿಟಿಯಲ್ಲಿರತಕ್ಕಂಥ ಅಧ್ಯಕ್ಷರು, ಕೌನ್ಸಿಲರುಗಳು, ಮುಂತಾಗಿ ಎಲ್ಲರೂ ಕುಳಿತಿದ್ದಾರೆ. ಇನ್ನೊಂದು ಕಡೆ ಕೇವಲ ಕೆಲವು ವರ್ತಕರು, ನಾಲ್ಕೈದು ಮನೆಗಳು ಸಣ್ಣದಾದಂಥ ವರ್ತಕರುಗಳ ಅಂಗಡಿಗಳನ್ನು ಇವರು ಕೆಡವಲು ಹೋಗದೇ ವಾಪಸ್ ಬಂದಿರುವುದಕ್ಕೆ ಇವೊತ್ತು ಗುಂಡಿಬಂಡೆಯಲ್ಲಿ ಕೋಮುಗಲಭೆಗೆ ಪ್ರಯತ್ನ ಮಾಡಿದಂಥ ಒಂದು ಆರೋಪ ಸರಕಾರದ ಮೇಲೆ ಬರುತ್ತದೆ ಇದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ...

Mr Chairman:- Will you kindly cut-short your speech? ವಿಷಯ ಸರಕಾರದ ಗಮನಕ್ಕೆ ಬಂದಿದೆ. ಅವರು ರಿಪ್ಲೈ ಕೊಡುತ್ತೇವೆಂದು ಹೇಳುತ್ತಾರೆ. ನೀವು ಡಿಮ್ಯಾಂಡ್ ಮೇಲೆ ಮಾತನಾಡುತ್ತಿರುವ ಹಾಗೆ ಕಾಣುತ್ತಿದೆ.

ಶ್ರೀ ಎನ್. ಸಂಪಂಗಿ:- ಇದು ಡಿಮ್ಯಾಂಡ್ ಮೇಲಿನ ಮಾತುಗಳಲ್ಲ. ಇದು ನನ್ನ ನೋವು. ನಾನು ಇದನ್ನು ಪ್ರಸ್ತಾಪಿಸುವುದು ಸರಿಯಲ್ಲವೆಂದು ಹೇಳುವುದಾದರೆ ನಾನು ಕುಳಿತುಕೊಳ್ಳುತ್ತೇನೆ. ನಾಳೆ ಅಲ್ಲಿ ಕೋಮು ಗಲಭೆಯ ಬೆಂಕಿ ಹೊತ್ತಿದ್ದರೆ, ಸಾವು-ನೋವುಗಳು ಆದರೆ ಇದಕ್ಕೆ ಯಾರು ಹೊಣೆಯಾಗುತ್ತಾರೆ? ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನನಗೆ ಮಾತನಾಡಲು ಅವಕಾಶ ಕೊಡಿ...

ಛೇರ್ಮನ್:- ನಿಮ್ಮ ನೋವು ಫೈಲ್ಸ್ ರೂಪದಲ್ಲಿರಬೇಕು. ಇದು ಲೆಕ್ವಿಡ್ ಫಾರ್ಮ್‌ನಲ್ಲಿರಬಾರದು. It should be in pills form. ಇನ್ನೂ ಮಾತನಾಡುವವರು 8-10 ಜನರಿದ್ದಾರೆ.

ಶ್ರೀ ಎನ್. ಸಂಪಂಗಿ:- ಇವರು ಕೆಲಸ ಪೂರ್ತಿ ಮಾಡುವುದಕ್ಕೆ ಹೋಗಿಲ್ಲ. ಇನ್ನು ಮುಂದೆ ಹೋಗತಕ್ಕಂಥಾದ್ದು ಕೆಲವು ಅಂಗಡಿಗಳನ್ನು ಅಂದರೆ ಕೆಲವು ಸಣ್ಣ ಭಾಗಗಳಲ್ಲಿ ಕೆಡವಿಬಿಟ್ಟು, ರಸ್ತೆ ವಿಸ್ತರಣೆ ಮಾಡಬೇಕು, ಮೊದಲನೆಯದಾಗಿ ಶಾಸಕರ ಗಮನಕ್ಕೆ ತಾರದೆ ಕೆಲಸವನ್ನು ಪ್ರಾರಂಭ ಮಾಡಿರುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಈ ಒಂದು ಅಧಿಕಾರವಿದೆಯೇ? ಎರಡನೆಯದಾಗಿ

ಕೆಡವಿರತಕ್ಕಂಥ ಮನೆಯವರಿಗೆ ನೋಟೀಸನ್ನು ಕೊಡದೆ ನಾಲ್ಕು ಹರಿಜನ:ಗಿರಿಜನರ ಮನೆಗಳನ್ನು ಕೆಡವಿದ್ದಾರೆ. ಹೀಗೆ ಮಾಡಲು ಇವರಿಗೆ ಯಾವ ಅಧಿಕಾರವಿತ್ತು? ಇವೊತ್ತು ಆ ಭಾಗದಲ್ಲಿ ಮುಷ್ಕರ ನಡೆಯುತ್ತಾ ಇದೆ. ಅಲ್ಲಿ ಎರಡು ಗುಂಪುಗಳಾಗಿವೆ. ಇವಕ್ಕೆ ಪರಿಹಾರ ಏನು ಕೊಡುತ್ತಾರೆ? ಹಾಗೆಯೇ ರಸ್ತೆಯನ್ನು ಅಗಲ ಮಾಡಲು ಹೋಗದೇ ನಿಲ್ಲಿಸಿದ್ದಾರಲ್ಲಾ ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಈ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ, ನಮ್ಮ ಸಂಪಂಗಿಯವರು ಅಲ್ಲಿಯ ಶಾಸಕರು. ಈ ಘಟನೆಯು 28ನೇ ತಾರೀಖಿನ ದಿವಸ ನಡೆದಿದೆ. ಈ ಘಟನೆ ನಡೆದ ಮೇಲೆ ಅಲ್ಲಿ ಏನು ರಸ್ತೆಯನ್ನು ಅಗಲ ಮಾಡಬೇಕಾಗಿದೆ. ಇರತಕ್ಕಂಥ ರಸ್ತೆ ಬಹಳ ಅಗಲವಿರಲಿಲ್ಲ. ಅಂಥ ಸ್ಥಳದಲ್ಲಿ ಈ ಒಂದು ಅಪಘಾತವಾಗಿದೆ. ಅದರಲ್ಲಿ ಲಕ್ಷ್ಮಿ ನಾರಾಯಣ ಎಂದು ಹೇಳಿ, ಒಬ್ಬ ಪರಿಶಿಷ್ಟ ಜಾತಿಯ ಹುಡುಗನು ತೀರಿಕೊಂಡಿದ್ದಾನೆ. ಅಲ್ಲಿರತಕ್ಕಂಥ ಶ್ರೀ ನರಸಿಂಹಮೂರ್ತಿ, ಶ್ರೀ ವೆಂಕಟಪ್ಪ, ಪತ್ರಕರ್ತರು ಮತ್ತು ಸಾರ್ವಜನಿಕರು ಎಲ್ಲರೂ ಕೂಡ ಧರಣಿ ಮಾಡಿದ್ದಾರೆ. ಈ ರಸ್ತೆಯನ್ನು ಅಗಲ ಮಾಡಲೇಬೇಕು, ಈ ರೀತಿಯಾದ ಅಪಘಾತಗಳನ್ನು ತಪ್ಪಿಸಬೇಕೆಂಬ ಪ್ರಸ್ತಾವದ ಮೇಲೆ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳು ಸ್ಥಳಕ್ಕೆ ಹೋಗಿದ್ದಾರೆ. ಅಧಿವೇಶನ ನಡೆಯತಕ್ಕಂಥ ಕಾಲದಲ್ಲಿ ತಮ್ಮನ್ನು ಭೇಟಿ ಮಾಡಿದ್ದಾರೋ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಅದರ ಬಗ್ಗೆ ವಿಚಾರ ಮಾಡುತ್ತೇನೆ. ತಮ್ಮನ್ನೂ ಕೂಡ ಕರೆಸಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಮೃತಪಟ್ಟ ಹುಡುಗನ ಕುಟುಂಬದವರಿಗೆ ಕಾಂಪನ್‌ಸೇಶನ್ ಕೂಡ ಕೊಟ್ಟಿದ್ದಾರೆ. ಒಟ್ಟು ಅಲ್ಲಿ ಮೂರು ಕಚ್ಚಾ ಮನೆಗಳು ಇವೆ. ಅಲ್ಲಿದ್ದ ಹರಿಜನ:ಗಿರಿಜನರಿಗೆ ಸಂಬಂಧಪಟ್ಟಂಥ ಮನೆಗಳನ್ನು ತೆಗೆಯತಕ್ಕಂಥ ಪ್ರಯತ್ನ ಮಾಡಿದ್ದಾರೆ. ರಸ್ತೆಯನ್ನು ಸ್ವಲ್ಪ ಅಗಲ ಮಾಡಿದ್ದಾರೆ. ಮುಂದೆ ಈ ಅಪಘಾತ ಆಗದ ಹಾಗೆ ಸರಿಯಾದ ಕ್ರಮವನ್ನು ಅನುಸರಿಸಲು ಹೋಗಿದ್ದಾರೆ. 31ನೇ ತಾರೀಖಿನ ದಿವಸ ತೆಗೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈ ವಿಚಾರವನ್ನು ಶೂನ್ಯವೇಳೆಯಲ್ಲಿ ನನ್ನ ಗಮನಕ್ಕೆ ತಂದಮೇಲೆ ಇರತಕ್ಕಂಥ ವರದಿಯನ್ನು ಸಲ್ಲಿಸಿದ್ದೇನೆ. ಮುಂದೆ ಅಲ್ಲಿ ಜಿಲ್ಲಾಧಿಕಾರಿಗಳು ಮತ್ತು ಅಸಿಸ್ಟೆಂಟ್ ಕಮಿಶನರ್‌ರವರು ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು ಏನು ಮಾಡಬೇಕಾಗುತ್ತು. ಎಲ್ಲಿ ಎಡವಿದ್ದಾರೆ, ಎಂಬುದನ್ನು ತಮ್ಮ ಸಮಕ್ಷಮ ಅವರುಗಳನ್ನು ಕರೆಸಿ ಮಾತನಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇವೊತ್ತು ರಸ್ತೆ ಅಗಲೀಕರಣ ಮಾಡತಕ್ಕಂಥ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಅವರು ಇತರ ಅಧಿಕಾರಿಗಳನ್ನು ಸಂಪರ್ಕ ಮಾಡಿದಂತೆ ಶಾಸಕರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಅಲ್ಲಿ ಬಹಳ ದೊಡ್ಡ ಪ್ರಮಾಣದಲ್ಲೇನೂ ಅತಿಕ್ರಮಣವಾಗಿಲ್ಲ. ರಸ್ತೆ ಅಗಲೀಕರಣಕ್ಕಾಗಿ ಅಲ್ಲಿ ಇರತಕ್ಕಂಥ ಕೆಲವು ಮನೆಗಳನ್ನು ತೆಗೆದುಕೊಂಡಿದ್ದಾರೆ. ಸಾರ್ವಜನಿಕರ ಒತ್ತಾಯದ ಮೇಲೆ ರಸ್ತೆ ಅಗಲೀಕರಣ ಮಾಡತಕ್ಕಂಥ ರೀತಿಯಲ್ಲಿ ತಮಗೂ ಕೂಡ ಸಂತೋಷವಾಗಬೇಕು. ಆ ರೀತಿಯಲ್ಲಿ ಅಲ್ಲಿನ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಇನ್ನೂ ಹೆಚ್ಚಿನ ವಿವರಗಳು ಬೇಕಾಗಿದ್ದರೆ, ತಾವುಗಳು ಸದನದ ಗಮನಕ್ಕೆ ಯಾವ ವಿಚಾರಗಳನ್ನು ತಂದಿದ್ದೀರಿ ತಮಗೇನೂ ಕೇಳಿಲ್ಲವೆಂದು ಹೇಳಿದ್ದೀರಿ ಸರಕಾರ ಅದರ ಬಗ್ಗೆಯೂ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.